SUPPLY OF HYBRID JOWAR SEEDS

211. SRI V. V. WAI (Shirahatti).—Will the Minister for Agriculture and Animal Husbandry be pleased to state:—

(*a*) whether it has come to notice of the Government that the ryots did not get hybrid jower seeds and manure in time;

(*b*) whether it has come to the notice of the Government that the ryots producing hybrid seeds did not sell their produce to the Government and hence the Government could not supply good quality seeds to the ryots;

(*c*) whether Government have considered the reduction in jowar crop due to the reasons mentioned above;

(*d*) whether Govenment have formulated any programme for supply of hybrid seeds manure and pesticides in time at least this year?

SRI N. CHIKKE GOWDA.—(Minister for Agriculture and Animal Husbandry)

(*a*) Yes.

(*b*) Yes.

(*c*) The hybrid jowar crop is good in all the areas. But in certain areas due to insufficient manuring and less fertility the yield may have been less. The yield of hybrid jowar is 4—6 quintal more than that of local jowar.

(*d*) Yes.

ಶ್ರೀ ಬಿ. ಜಿ. ಬಣಕಾರ್:—ಹೋದ ವರ್ಷ ರಾಜ್ಯದಲ್ಲಿ ಎಷ್ಟು ಜನ ಬೀಜೋತ್ಪಾದಕರು ಬೀಜಗಳನ್ನು ಬೆಳೆದರು? ಎಷ್ಟು ಸರ್ಕಾರಕ್ಕೆ ಕೊಟ್ಟರು?

ಹೋದ ವರ್ಷ ಬೀಜೋತ್ಪತ್ತಿ ಮಾಡಿದ ರೈತರು ಸರಕಾರಕ್ಕೆ ಬೀಜವನ್ನೇ ಪೂರೈಸಲಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ, ಅವರ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ?

‡ಶ್ರೀ ಎನ್. ಚಿಕ್ಕೇಗೌಡ :—ಹೋದ ವರ್ಷ 1973ನೇ ಸಾಲಿನ ಮುಂಗಾರಿನಲ್ಲಿ 5 ಲಕ್ಷ 50 ಸಾವಿರ ಎಕರೆಯಲ್ಲಿ ಶಕ್ತಿಮಾನ್ ಜೋಳವನ್ನು ಪೂರೈಸಬೇಕು ಎಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು, ಅದರ ಪ್ರಕಾರ 1 ಎಕರೆಗೆ ಎರಡೂವರೆ 3 ಕೇಜಿ ಬೀಜ ಆಗಬಹುದೆಂದು ಲೆಕ್ಕ ಹಾಕಿ ಅಂದಾಜು ಮಾಡಲಾಗಿತ್ತು ಅದರ ಪ್ರಕಾರ ಶಕ್ತಿಮಾನ್ ಜೋಳವನ್ನು ಬೆಳೆಯುವುದಕ್ಕೆ ಮೂಲ ಬೀಜ ಉತ್ಪಾದನೆ ಮಾಡತಕ್ಕ ನ್ಯಾಶನಲ್ ಸೀಡ್ಸ್ ಕಾರ್ಪೊರೇಷನ್ ಮತ್ತು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇವುಗಳು ಎಲ್ಲಾ ಸೇರಿ ಸುಮಾರು 1750 ಎಕರೆ ಪ್ರದೇಶದಲ್ಲಿ ಮೂಲ ಬೀಜವನ್ನು ಉತ್ಪಾದನೆ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವು. 625 ಎಕರೆಗೆ 3500 ಕ್ವಿಂಟಾಲ್ ಬೀಜ ಉತ್ಪಾದನೆ ಮಾಡಿದ್ದಾರೆ. ಖಾಸಗಿಯವರಿಂದ 970 ಎಕರೆಯಲ್ಲಿ 600 ಕ್ವಿಂಟಾಲ್ ಬೀಜವನ್ನು ಉತ್ಪಾದನೆ ಮಾಡಲಾಯಿತು. 13 ಸಾವಿರ ಕ್ವಿಂಟಾಲ್ ಬೀಜ ಉತ್ಪಾದನೆ ಮಾಡುವುದು ಸ್ವಲ್ಪ ತಡವಾಯಿತು. ಮೈಸೂರು, ಧಾರವಾಡ ಮತ್ತಿತರ ಕೆಲವು ಜಿಲ್ಲೆಗಳಲ್ಲಿ ಮುಂಗಾರು ಮಳೆ ಜೂನ್ ತಿಂಗಳಲ್ಲಿ ಬಿದ್ದುದರಿಂದ ಬೀಜದ ಕೊರತೆ ಬಿದ್ದಿತು. ಬೀಜದ ಬೆಲೆ ಹೆಚ್ಚಾಗಿರುವುದರಿಂದ ಇತರ ರಾಜ್ಯಗಳಲ್ಲಿ ಬೀಜದ ಕೊರತೆ ಬಂದಿರುವುದರಿಂದ ಹೆಚ್ಚಿನ ಬೆಲೆಗೆ ಮಾರಿಕೊಂಡಿರುತ್ತಾರೆ. ಬೀಜ ಉತ್ಪಾದನೆ ಮಾಡುವ ಕಾಲದಲ್ಲಿ ಸೀಡ್ ಕಾರ್ಪೊರೇಷನ್ ಮತ್ತು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಗೆ ಬೀಜವನ್ನು ಬೆಳೆದು ವಾಪಸ್ಸು ಕೊಡಬೇಕೆಂದು ಶರತ್ತು ಹಾಕಿದ್ದೆವು, ಆದರೆ ಅವರು ಶರತ್ತು ಮೀರಿ ಬೆಳೆ ಬಂದ ಕಾಲದಲ್ಲಿ ಮಾರಿಕೊಂಡಿರುವುದರಿಂದ ಬೀಜದ ಕೊರತೆ ಬಂತು.

ಶ್ರೀ ಕೋಣಂದೂರು ಲಿಂಗಪ್ಪ :—ಬೀಜ ಕೊಡದೆ ಇರುವವರ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಚಿಕ್ಕೇಗೌಡ :—ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆದುದರಿಂದ ಈ ಒಂದು ಕೊರತೆ ಇರುವುದರಿಂದ ಮುಂದೆ ಆ ರೀತಿ ಆಗದ ಹಾಗೆ ಸರ್ಕಾರ ನೋಡಿಕೊಳ್ಳುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :—ಸ್ವಾಮಿ, ಸರಿಯಾಗಿ ಬೀಜವನ್ನು ಕೊಡಬೇಕೆಂದು ಒಪ್ಪಂದ ಮಾಡಿಕೊಂಡರೂ ಅವರು ಕೊಟ್ಟಂಥ ಬೀಜ ಕಳಪೆಮಟ್ಟದ್ದು ಆಗಿತ್ತು. ಇದರಿಂದ ರೈತರಿಗೆ ನುಕ್ಸಾನು ಆಗಿದೆ. ಆದುದರಿಂದ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಚಿಕ್ಕೇಗೌಡ:—ಹೋದ ವರ್ಷ ಬೀಜ ಕೆಳಮಟ್ಟದ್ದು ಎಂದು ಹೇಳಲಿಲ್ಲ, ಬೀಜ ಸಿಕ್ಕಲಿಲ್ಲ ಅದರಿಂದ ತೊಂದರೆಯಾಗಿದೆ ಎಂದು, ಕಾಗೋಡು ತಿಮ್ಮಪ್ಪನವರು ಈ ವರ್ಷದ್ದು ಯೋಜನೆ ಮಾಡುತ್ತಿದ್ದಾರೆ, ಅವರು ಕೇಳುತ್ತಾ ಇರುವುದು ಶಕ್ತಿಮ್ಯಾನ್ ಜೋಳದ್ದು ನೀವು ಗುಲ್ಬರ್ಗದ್ದು ಕೇಳುತ್ತಾ ಇದ್ದೀರಿ. ಅವರು ಹೇಳುತ್ತಿರುವ ಬೀಜ ಬೇರೆ ಅವರು ಹೇಳಿದ್ದು ಕೇಳಿ ತಿಳಿದುಕೊಂಡು ಪ್ರಶ್ನೆಯನ್ನು ಕೇಳಿ.

1-30 P. M.

ಶ್ರೀ ಕೆ. ಎಚ್. ಹನುಮೇಗೌಡ:....ಜವಾರ್ ಬೀಜ ಕೊಟ್ಟಿದ್ದಾರೆ. ಎಷ್ಟೋ ಜನ ಹಾಕಿದ್ದಾರೆ ಹುಟ್ಟಿಯೇ ಇಲ್ಲ, ಪ್ರೊಡ್ಯೂಸ್ ಮಾಡುವವರದ್ದು ತಪ್ಪು ಎಂದು ಹೇಳುತ್ತಾರೆ. ಪ್ರೊಡ್ಯೂಸ್ ಮಾಡುವವರು, ನಾವು ಸರಿಯಾಗಿ ಪ್ರೊಡ್ಯೂಸ್ ಮಾಡಿದೆವು, ಟ್ರಾನ್ಸ್‌ಪೋರ್ಟ್ ಮಾಡುವ ಕಾಲದಲ್ಲಿ ಬೇರೆ ಕೊಟ್ಟಿರಬಹುದು ಎಂದು ಹೇಳುತ್ತಾರೆ. ಬೆಳೆದವರು ಸಾಗಾಣಿಕೆಯವರ ಮೇಲೆ ಹಾಕುತ್ತಾರೆ, ಸಾಗಾಣಿಕೆ ವ್ಯಾಪಾರ ಮಾಡುವವರು ಬೆಳೆದವರ ಮೇಲೆ ಹಾಕುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ತಪ್ಪಿಸಿ ರೈತರಿಗೆ ಒಳ್ಳೆಯ ಬೀಜ ದೊರಕುವುದಕ್ಕೆ ಏನು ಏರ್ಪಾಟು ಮಾಡುತ್ತೀರಿ ?

ಶ್ರೀ ಎನ್. ಚಿಕ್ಕೇಗೌಡ:—ಮಾನ್ಯ ತಿಮ್ಮಪ್ಪನವರು, ಹನುಮೇಗೌಡರು ಕೇಳತಕ್ಕದ್ದು ಗುಲ್‌ಬರ್ಗ ಮತ್ತು ಬೀದರ್, ರಾಯಚೂರು ಪ್ರದೇಶದಲ್ಲಿ ನಡೆದಂಥಾದ್ದು. ಹೋದವರ್ಷ ಎರಡು ತರಹ ಬೀಜ ಹಂಚಿದ್ದೇವೆ. ಬೀಜ ಉತ್ಪಾದನೆ ಮಾಡತಕ್ಕ ಸಂಸ್ಥೆಗಳ ಮೂಲಕ ಸಂಕೀರ್ಣ ಜಾತಿಯ ಜೋಳದ ಬೀಜವನ್ನು ಮೈಸೂರು ಧಾರವಾಡ ಪ್ರದೇಶಗಳಲ್ಲಿ ಹಂಚಲಾಗಿದೆ. ಹೊರಗಡೆ ರಾಜ್ಯಗಳಿಂದ ಬೀಜಗಳನ್ನು ತರಿಸಿಕೊಂಡು ಸಂಕೀರ್ಣ ಜಾತಿಗೆ ಸೇರಿದ ಬೀಜಗಳನ್ನು ಶಕ್ತಿಮಾನ ಇಲ್ಲದೇ ಇರತಕ್ಕ ಬೀಜವನ್ನು ಅಭಾವ ಪ್ರದೇಶಕ್ಕೆ ಕೊಟ್ಟಿದ್ದೇವೆ. ಇದರ ಬಗ್ಗೆ ದೂರುಗಳು ಬಂದಿವೆ. ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಆ ಕಾಲದಲ್ಲಿ ಹೆಚ್ಚಿನ ವಿವರ ತರಿಸಿ ಹೇಳೋಣ ಇದು 15,000 ಸಂಕೀರ್ಣ ಜಾತಿಯ ಜೋಳದ ಬೀಜವನ್ನು ಉತ್ಪಾದನೆಮಾಡಿ ರೈತರು 5 ಲಕ್ಷ 50,000 ಎಕರೆ ಪ್ರದೇಶದಲ್ಲಿ ಬೆಳೆಸತಕ್ಕ ಪ್ರಶ್ನೆ. ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ:—ಕಳೆದ ಸಾಲಿನಲ್ಲಿ ಹೈಬ್ರಿಡ್ ಬೀಜ ಕೊಟ್ಟಿದ್ದೇವೆ ಎಂದು ಉತ್ತರದಲ್ಲಿ ಹೇಳೀದ್ದೀರಿ. ಮಾನ್ಯ ಅಧ್ಯಕ್ಷರೇ ಅಹಾರ ರಚಿಸುವ ಇದ್ದಾರೆ. ಒಂದು ವಿನ ಟೀಪಾರ್ಟಿ ಕೊಡುವಾಗ ಹೇಳಿದರು.

ನ್ಯಾಷನಲ್ ಸೀಡ್ ಕಾರ್ಪೊರೇಷನ್ ಹೈಬ್ರಿಡ್ ಬೀಜ ಏನು ಕಳುಹಿಸಿದ್ದಾರೆ, ಅದರಲ್ಲಿ ಒಂದು ಬೀಜ (ಆರ್) ಕಾಂಗ್ರೆಸ್ಸಿನ ಬೀಜ, ಒಂದು ಬೀಜ (ಓ) ಕಾಂಗ್ರೆಸ್ಸಿನ ಬೀಜ. ನ್ಯಾಷನಲ್, ಸೀಡ್ ಕಾರ್ಪೊರೇಷನ್‌ನಲ್ಲಿ ಕಂಡಿರುವುದರಲ್ಲ ಒಂದು ಕುಳ್ಳು ಬೀಜ, ಒಂದು ಉದ್ದನೆ ಬೀಜ. ನ್ಯಾಷನಲ್ ಸೀಡ್ ಕಾರ್ಪೊರೇಷನ್ ಕಳೆದ ವರ್ಷ 20 ತರಹ ಬೀಜಗಳನ್ನು ಹಂಚಿದೆ. ಇದು ನ್ಯಾಯವೇ, ಪರಿಶೀಲನೆಮಾಡಿ. ದಯಮಾಡಿ ಇದನ್ನು ಪರಿಶೀಲನೆ ಮಾಡಿ ಸ್ಪಷ್ಟವಾದಂಥ ಉತ್ತರ ಕೊಡಿ.

ಶ್ರೀ ಎನ್. ಚಿಕ್ಕೇಗೌಡ:—ಮೂನ್ಯ ಸಿದ್ದಪ್ಪನವರು ಕೇಳಿದ ವಿಷಯದ ಬಗ್ಗೆ ಹೇಳುವುದಾದರೆ, ಸಂಕೀರ್ಣಜಾತಿ ಬೀಜದ ಬಗ್ಗೆ ಅವರು ಅಲ್ಪ ಸಮಾಚಾರವನ್ನು ತಿಳಿದುಕೊಂಡಿದ್ದಾರೆಂದು ಹೇಳಬೇಕಾಗುತ್ತದೆ. ಈ ಬೀಜಗಳಲ್ಲಿ (ಓ) ಇಲ್ಲ, (ಆರ್) ಇಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ: ಕೆ. ಎಚ್. ಪಾಟೀಲರ ಬೀಜ, ಚಿಕ್ಕೇಗೌಡರ ಬೀಜ, ಯಾವುದೂ ಹುಟ್ಟುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ: ಈ ಬೀಜಗಳಲ್ಲಿ ಎರಡು ತರಹ ಇರುತ್ತದೆ. ಒಂದು ಹೆಣ್ಣು ಇನ್ನೊಂದು ಗಂಡು. ಇವುಗಳನ್ನು ಬೇರೆ ಬೇರೆ ಹಂತಗಳಲ್ಲಿ ಉತ್ಪಾದನೆ ಮಾಡಿರುತ್ತಾರೆ. ಇದಕ್ಕೆ ಸಂಕೀರ್ಣಜಾತಿ ಎಂದು ಹೆಸರು. ಹೋದ ವರ್ಷ ನ್ಯೂಕ್ಲಿಯಸ್ ಫೌಂಡೇಷನ್ ಬೀಜ ಕೊಟ್ಟಿದ್ದಾರೆ. ಅದರ ಬಗ್ಗೆ ದೂರುಗಳು ಇವೆ ಈ ವರ್ಷ ಕೊಟ್ಟ ಬೀಜದ ಬಗ್ಗೆ ದೂರುಗಳು ಇವೆ. ನಾಷನಲ್ ಸೀಡ್ ಕಾರ್ಪೊರೇಷನ್ ಸಂಸ್ಥೆಯವರು ಏನಿದ್ದಾರೆ ಅವರಿಗೆ ಸರ್ಕಾರದ ಪರವಾಗಿ ಕಳೆದ ತಿಂಗಳು 22ನೇ ತಾರೀಖು ಡೆಲ್ಲಿಗೆ ಹೋದ ಕಾಲದಲ್ಲಿ ಸಂಬಂಧಪಟ್ಟ ಕೃಷಿ ಮಂತ್ರಿಗಳು ತಿಳಿಸಿದ್ದಾರೆ. ಸಂಬಂಧಪಟ್ಟ ಅಧ್ಯಕ್ಷರು ಕರೆಸಿ ದೂರು ಕೊಟ್ಟಿದ್ದಾರೆ. ಸರಿಯಾಗಿ ಹುಟ್ಟದೇ ಇರುವುದರಿಂದ ಬೇರೆ ಬೀಜ ಕೊಟ್ಟಿದ್ದಾರೆ. ಬೀಜಗಳನ್ನು ತೆಗೆದುಕೊಂಡು ಹೋಗಿ ಯೂರು ಹಾಕಿದ್ದಾರೆ ಅವರಿಂದ ವೈಯುಕ್ತಿಕವಾದ ದೂರುಗಳು ಏನು ಬಂದಿವೆ. ಆ ದೂರುಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಇದರಲ್ಲಿ (ಓ) ಇಲ್ಲ, (ಆರ್) ಇಲ್ಲ.

ಶ್ರೀ ಬಿ.ಜಿ. ಬಣಕಾರ್: ಚಾಲೂ ಸಾಲಿನಲ್ಲಿ ರಾಜ್ಯಕ್ಕೆ ಬೇಕಾಗಿರುವ ಬೀಜ ಎಷ್ಟು? ಗೊಬ್ಬರ ಎಷ್ಟು? ಇವುಗಳನ್ನು ಸಕಾಲದಲ್ಲಿ ಒದಗಿಸುವುದಕ್ಕೆ ಯಾವ ಯಾವ ಕ್ರಮಗಳನ್ನು ರೂಪಿಸಿಕೊಂಡಿದ್ದೀರಿ?

ಶ್ರೀ ಎನ್. ಚಿಕ್ಕೇಗೌಡ:—ಈ ವರ್ಷದಲ್ಲಿ 5000 ಎಕರೆ ಪ್ರದೇಶದಲ್ಲಿ ಬೀಜೋತ್ಪಾದನೆ ಮಾಡಬೇಕು. ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನವರು ಪ್ರೋಗ್ರಾಂ ಕೊಟ್ಟಿದ್ದಾರೆ. ಅಗ್ರೋ ಇಂಡಸ್ಟ್ರೀಸ್ ಮತ್ತು ಮಾರ್ಕೆಟಿಂಗ್ ಸೀಡ್ ಕಾರ್ಪೊರೇಷನ್‌ನವರು ಸಹ ಎರಡೂವರೆ ಸಾವಿರ ಎಕರೆ ಪ್ರದೇಶದಲ್ಲಿ ಬೀಜೋತ್ಪಾದನೆ ಮಾಡುತ್ತಾರೆ. ಹೋದ ವರ್ಷ 5 ಲಕ್ಷ 50 ಸಾವಿರ ಎಕರೆ ಪ್ರದೇಶದಲ್ಲಿ ಸಂಕೀರ್ಣ ಜಾತಿಯ ಜೋಳವನ್ನು ಹಾಕಿದ್ದರು. ಈ ವರ್ಷ ಇನ್ನೂ 10 ಪರ್ಸೆಂಟ್ ಜಾಸ್ತಿಯಾಗಬಹುದು. ಬೀಜದ ಕೊರತೆ ಬಂದರೆ ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನವರು ಕೊಡುತ್ತೇವೆಂದು ಹೇಳಿದ್ದಾರೆ. ಸಂಕೀರ್ಣ ಜಾತಿ ಬೀಜಗಳು ಗೊಬ್ಬರ, ಕ್ರಿಮಿನಾಶಕ ವಸ್ತುಗಳನ್ನು ಅಗತ್ಯವಾಗಿ ಕೊಡಬೇಕು ಎಂದು ಸರ್ಕಾರ ಹುಕುಂ ಹೊರಡಿಸಿದೆ. ಮುಂಗಾರು ಬೆಳೆಗೆ ಬೇಕಾದಂಥ ಎಲ್ಲಾ ಸವಲತ್ತು ಒದಗಿಸುವುದಕ್ಕೆ ಮುಂಜಾಗ್ರತೆ ಕ್ರಮ ತೆಗೆದು ಕೊಂಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ:—ನ್ಯಾಷನಲ್ ಸೀಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಫೌಂಡೇಷನ್ ಸೀಡ್ ಕೊಟ್ಟು ಬೀಜೋತ್ಪಾದನೆ ಮಾಡಿ ಸರ್ಟಿಫೈ ಮಾಡುತ್ತಾರೆ. ಆಗ ಇರತಕ್ಕ ನ್ಯೂನತೆ ಏನಿದೆ ಅದನ್ನು ಈಗಲಾದರೂ ಸರಿಪಡಿಸಲಿಕ್ಕೆ, ಅದರಿಂದ ರೈತರಿಗೆ ಆಗತಕ್ಕ ದೊಡ್ಡ ಅನಾಹುತ ಏನು ಇದೆ ಅದರಿಂದ ರೈತ ವಿಮುಕ್ತನಾಗಲಿಕ್ಕೆ ಏನಾದರೂ ಸರಿಯೂದಂಥ, ಬಿಗಿಯೂದಂಥ ಕ್ರಮ ತೆಗೆದುಕೊಳ್ಳಲಿಕ್ಕೆ ನಿಮ್ಮ ಪರಿಮಿತಿಯಲ್ಲಿ ಸಾಧ್ಯವೇ ?

ಶ್ರೀ ಎನ್. ಚಿಕ್ಕೇಗೌಡ:—ನಮ್ಮ ರಾಜ್ಯಸರ್ಕಾರದ ಪರಿಮಿತಿಯಲ್ಲಿ 3 ಇಲಾಖೆ ಇದೆ. ಸೀಡ್ ಸರ್ಟಿಫೈ ಯೂನಿಯನ್ ಎಂದು ಮಾಡಿ, ಇನ್ನು ಮುಂದೆ ಸಂಕೀರ್ಣ ಜಾತಿಯಾಗಲೀ, ಬೇರೆ ಜಾತಿಯಾಗಲೀ, ಬೀಜಗಳ ಬಗ್ಗೆ ಇನ್‌ಸ್ಪೆಕ್ಟ್ ಮಾಡಿ ಕೊಡುವುದಕ್ಕೆ ನಮ್ಮ ಇಲಾಖೆಯಲ್ಲಿ ಸೀಡ್ ಸರ್ಟಿಫೈ ಯೂನಿಯನ್ ಇನ್ಸ್‌ಪೆಕ್ಟ್ ಆಫೀಸರ್ಸ್ ಎಂದು ಹೇಳಿ ಹೆಚ್ಚು ಹೆಚ್ಚು ಅಧಿಕಾರಿಗಳನ್ನು ನೇಮಿಸಿ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಮತ್ತು ರಾಷ್ಟ್ರೀಯ ಬೀಜೋತ್ಪಾದನೆ ಸಂಸ್ಥೆಯ ಬಗ್ಗೆ ಇರುವ ದೂರುಗಳನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಈ ಬೀಜದ ಬಗ್ಗೆ ಲೋಪ ದೋಷಗಳಿದ್ದರೆ, ದೂರುಗಳಿದ್ದರೆ ಬದಲಾವಣೆ ಮಾಡುವುದಕ್ಕೆ ತಯಾರಿದ್ದೇವೆ ಎಂದು ಅವರು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಕಳೆದ ಒಂದೆರಡು ತಿಂಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ರಾಷ್ಟ್ರೀಯ ಬೀಜೋತ್ಪಾದನಾ ಸಂಸ್ಥೆಯವರು ಕೊಟ್ಟಿರತಕ್ಕ ಬೀಜಗಳಿಂದ ಮೊಳಕೆ ಬಾರದೆ ಇರತಕ್ಕ ದೂರುಗಳು ಸರ್ಕಾರಕ್ಕೆ ಬಂದಿವೆಯೇ,

ಬಂದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಕಳೆದ ಸಾರಿ ಸೀಡ್ ಪ್ರೊಡ್ಯೂಸರ್ ಯೂನಿಟ್ ಸಬ್ ಕೋಟ್ ಸೇರಿಸಿ ಮಾರಾಟ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಎನ್. ಚಿಕ್ಕೇಗೌಡ.—ಕೇರಳ ಸ್ಟೇಟ್ ಸೀಡ್ ಮಾರ್ಕೆಟಿಂಗ್ ಫೆಡರೇಷನ್ ಸಂಸ್ಥೆಯಲ್ಲಿ ಎರಡೂವರೆ ಸಾವಿರ ಎಕರೆಗೆ ಬೀಜ ಕೊಟ್ಟಿದ್ದು, ಅದು ಸರಿಯಾಗಿ ಹುಟ್ಟಿದೆ ತೊಂದರೆಯಾಗಿದ್ದುದರಿಂದ, ಬದಲು ಬೀಜ ಕೊಟ್ಟಿದ್ದಾರೆ. ಇದರಿಂದ ಆಗತಕ್ಕ ನಷ್ಟ ಮತ್ತು ಬೀಜ ಉತ್ಪಾದನೆ ಆಗುವ ಕೊರತೆ ಬೀಳುವು ದರಿಂದ ಕೊರತೆ ಬೀಳುವ ಬೀಜಕ್ಕೆ ಬೀಜ ಕೊಡಬೇಕು ಎಂದು ಹೇಳಿದ್ದೇವೆ. ಮೈಯುಕ್ತಿಕವಾಗಿ ಪಡೆದಿರತಕ್ಕ ತೊಂದರೆಗಳನ್ನು ಸಹ ನ್ಯಾಷನಲ್ ಸೀಡ್ ಕಾರ್ಪೋರೇಷನ್‌ಗೆ ಕಳುಹಿಸಿಕೊಟ್ಟಿದ್ದೇವೆ, ಮತ್ತು ಕೇಂದ್ರ ಸರ್ಕಾರಕ್ಕೂ ತಿಳಿಸಿದ್ದೇವೆ.

MADAM SPEAKER : Questions are over.

QUESTIONS FOR ANSWERS ON THE DAY
(But not taken up)

CO-OPERATIVE SOCIETIES IN CHIKODI TALUK

76. SRI J. S. AMMANNAVAR (Sadalga). —

Will the Minister for Co-operation be pleased to state :—

(*a*) the number of co-operative societies in Chikodi Taluk (Categorywise details may be furnished) ;

(*b*) the number and the names of the societies not audited during 1969-70, 1970-71, 1971-72 and 1972-73 ?

SRI C. N. PATIL (Minister for Co-operation) —

(*a*) 217 Societies

(i) Primary Agricultural Credit Societies	97
(ii) Non-Agricultural Credit Societies	90